Reg No 6 G 155 30—3—72

55 th Year of Publication ★★ 'Satyavadi' Daily, Mysore 4

In the Sta e – The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂವತ್ಸರವೀರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ವಿಶ್ವಸಂಸ್ಥೆಯಲ್ಲಿ ಪಾಕ್‌ನ ತಪ್ಪು ಒಪ್ಪಿಗೆ

ಅಧಿಕಾರಿಗಳ ಸ್ಥಳ ಬದಲಾವಣೆ

ಬೆಂಗಳೂರು— ಸೆಕರ್ಟೇರಿಯಟ್ ಮಟ್ಟದಲ್ಲಿ ಹಿರಿಯ ಅಧಿಕಾರಿಗಳ ಉನ್ನತ ಮಟ್ಟದ ಸ್ಥಳಗಳ ಬದಲಾವಣೆ ನಡೆಯುವ ನಿರೀಕ್ಷೆ ಇದೆ

○

ಬಸ್ ನೀರಿಗೆ ಬಿದ್ದಿತು

ಕೊಚ್ಚಿ – 75 ಪ್ರಯಾಣೀಕರಿದ್ದ ಒಂದು ಖಾಸಗಿ ಬಸ್ಸು ಕೊಚ್ಚಿ ರೇವಿನ ಹತ್ತಿರ ನೀರಿಗೆ ನುಗ್ಗಿ ಮುಳುಗಿತು – ಅನೇಕರು ಈಜಿಕೊಂಡು ಬಂದರು.

○

ಚಿಕ್ಕ ವೆಚ್ಚಾರು

ನವದೆಹಲಿ 18 ವರ್ಷಗಳ ಚರ್ಚೆ, ಆಲೋಚನೆಗಳ ನಂತರ, ಫ್ರೆಂಚ್ ರಿನೌಲ್ ಆರ್ 6 ಕಾರ್, ಈ ದೇಶದಲ್ಲಿ ಸರಕಾರಿ ವಿಭಾಗದಲ್ಲಿ ತಯಾರಿಸಲು ಕೈಗಾರಿಕಾ ಸಚಿವಾಲಯವು ಮಂತ್ರಿಮಂಡಲಕ್ಕೆ ಶಿಫಾರಸು ಮಾಡಿದೆ.

●

ಅಡಿಗೆ ಯಂತ್ರ [ಐ ಪಿ ಎಫ್]

ಪಶ್ಚಿಮ ಜರ್ಮನಿಯ ಕೊಲೋನ್‌ನಲ್ಲಿ ನಡೆದ 13 ನೇ ಅಂತರಾಷ್ಟ್ರೀಯ ಗೃಹ ವಸ್ತುಗಳ ಪ್ರದರ್ಶನದಲ್ಲಿ ಅಡಿಗೆಯ ಎಲ್ಲಾ ಕೆಲಸಗಳನ್ನೂ ಗುಂಡಿ ಒತ್ತಿ ಮಾಡಬಹುದಾದ ಯಂತ್ರ ಪ್ರದರ್ಶಿಸಲಾಗಿದೆ – ಇದರ ಬೆಲೆ 6200 ಡಾಲರುಗಳು – ಪ್ರದರ್ಶನದಲ್ಲಿ 32 ದೇಶಗಳು ಭಾಗವಹಿಸಿದ್ದವು

★

ಪಾತ್ರೆ ತುಲಾಭಾರ

ಧಾರವಾರ– ಉದಾರ ದಾನಿ ಶ್ರೀ ರನ್ನು ಣ ತಕಲ್ವಾಡಿಯವರನ್ನು ಸನ್ಮಾನಿಸಲಾಯಿತು ; ಅವರಿಗೆ ನಡೆಸಿದ ತುಲಾಭಾರದ ಪಾತ್ರೆಗಳನ್ನೂ ಮತ್ತು ಒಟ್ಟಿಗಳನ್ನೂ ಉದಾರ ದಾನಮಾಡಿದರು

★

ಲಿಖಿತ ರಾಮನಾಮ ಯಜ್ಞ

ತ್ರಿವೇಂಡ್ರಂ– ಕಟ್ಟಂ ಎಂಬ ಊರಿನಲ್ಲಿ ನಡೆದ ಪ್ರಮಾರಂಭದಲ್ಲಿ 5000 ಬಾರಿ ರಾಮಾಯಣ ಬರೆದವರಿಗೆ ಬಹುಮಾನ ವಿತರಣೆ ನಡೆಯಿತು ಬಹುಮಾನ ಗೆದ್ದವರಲ್ಲಿ ಒಬ್ಬ ಮುಸ್ಲಿಂ ಬಾಲಕಿ, ಒಬ್ಬ ಕ್ರೈಸ್ತ ಯರ್ ಹುಡುಗ ಸಹಾ ಇದ್ದರು. ಕಂಚಿ ಕಾಮಕೋಟಿ ಪೀಠದ ಶ್ರೀ ಜಯೇಂದ್ರ ಸರಸ್ವತಿ ಸ್ವಾಮಿಗಳು, ಶ್ರೀ ವೆಂಕಟೇಶ್ವರ ಚಿತ್ರವುಳ್ಳ ಲಾಕೆಟ್‌ಗಳನ್ನು ಅವರಿಗೆ ಬಹುಮಾನಿಸಿದರು — ಈ ಬಹುಮಾನ ಪಡೆಯಲು ಬಹುಮಂದಿ 5 ಸಾವಿರ ಸಾರಿ ರಾಮಾಯಣ ಬರೆಯಲು ಹೊರಟಿದ್ದಾರೆ – ಮುಸ್ಲಿಂರೂ ಕ್ರೈಸ್ತಿಯನ್ನರೂ ಭಾಗವಹಿಸುತ್ತಿದ್ದಾರೆ – ಸ್ವಾಮಿಯವರಿಂದ ಲಾಕೆಟ್ ಪಡೆಯಲು ಕಮ್ಯುನಿಸ್ಟು ಮತ್ತು ಮಾರ್ಕ್ಸಿಸ್ಟರ ಮಕ್ಕಳೂ ಐದಯ್ದು ಸಾರಿ ರಾಮನಾಮ ಬರೆಯುತ್ತಿದ್ದಾತೆಂದು ಗೊತ್ತಾಗಿದೆ.

ನೀರು ನಿಲ್ಲುತ್ತದೆ

ಮೈಸೂರು— ಭಾನುವಾರ ಹೊಂಗಳ್ಳಿ ಮತ್ತು ಬೆಳಗೊಳದಲ್ಲಿ ವಿದ್ಯುಚ್ಛಕ್ತಿ ಇಲ್ಲದಿರುವುದರಿಂದ ಅಂದು ನಗರದಲ್ಲಿ ಬೆಳಿಗ್ಗೆ 9 ಗಂಟೆ ಮೇಲೆ ನೀರು ಸರಬರಾಜಾಗುವುದಿಲ್ಲವೆಂದೂ. ಸೋಮವಾರ ಬೆಳಿಗ್ಗೆಯೂ ನೀರು ಸರಬರಾಜು ಇಲ್ಲದಿರುವ ಸಂಭವವಿದೆಯೆಂದೂ ಉಪ ವಾರ್ತಾಧಿಕಾರಿಗಳು ತಿಳಿಸಿದ್ದಾರೆ.

★

ಹುಚ್ಚನ ಕೈಯಿನ ಕೋಲು

ಗಾಂಧಿನಗರ— ಪಂಚಮಹಲ್ ಜಿಲ್ಲಾ ಹಲೋಲಿನಲ್ಲಿಯ ಒಂದು ಜಿಲ್ಲೆಯ ಒಂದು ಜೈಲಿದಲ್ಲಿ ಒಬ್ಬ ಹುಚ್ಚನು ಒಬ್ಬ ಸ್ಥಾನಬದ್ಧ ಖೈದಿಯನ್ನು ಒಂದು ಕೋಲಿನಿಂದ ಹೊಡೆದು ಸಾಯಿಸಿದನು

ಪಾಕಿಸ್ತಾನಕ್ಕೆ ಅರಬ್ ರಾಜ್ಯಗಳ ನೆರವು

ನ್ಯೂಯಾರ್ಕ್— ಭಾರತದ ಮೇಲಿನ ಪಾಕಿಸ್ತಾನ್ ಯುದ್ಧದಲ್ಲಿ ಎರಡು ಅರಬ್ ದೇಶಗಳು ಲಿಬಿಯಾ ಮತ್ತು ಜೋರ್ಡನ್ ಪಾಕಿಸ್ತಾನಕ್ಕೆ ಅಮೇರಿಕಾ ತಯಾರಿಕೆಯ ಜಟ್ ವಿಮಾನಗಳನ್ನು ಸರಬರಾಜು ಮಾಡಿದ್ದವು.

●

ವೆಸಕ್ಟಮಿ, ಟ್ಯುಬೆಕ್ಟಮಿ ಶಿಬಿರ

ಬೆಂಗಳೂರು— ಬೆಳಗಾವಿ ಜಿಲ್ಲೆಯಲ್ಲಿ ಪ್ರಚಲಿತ ವರ್ಷದಲ್ಲಿ ನಾಲ್ಕು ಸಾವಿರದ ಏಳನೂರ ಎಂಭತ್ತೂರು ಜನರು ವೆಸೆಕ್ಟಮಿ ಮತ್ತು ಟ್ಯುಬೆಕ್ಟಮಿ ಶಸ್ತ್ರಚಿಕಿತ್ಸೆಯನ್ನು ಹೊಂದಿದ್ದಾರೆ – ಸಾಧಿಸಬೇಕಾದ ಗುರಿ 5880.

★

ವಿದ್ಯುತ್ ಸೌಲಭ್ಯ ವೆಚ್ಚ

ಈಗ ಒಂಟು ಗ್ರಾಮಕ್ಕೆ ವಿದ್ಯುತ್ ಸೌಲಭ್ಯ ವಿಸ್ತರಿಸಲು 35 ಸಹಸ್ರ ರೂಪಾಯಿ ನೀರಾವರಿ ಪಂಪಿಗೆ ವಿದ್ಯುತ್ಶಾಲನೆ ಮಾಡಲು 3 ಸಾವಿರ ರೂಪಾಯಿ ವೆಚ್ಚವಾಗುತ್ತೆ

●

ಭಾರತಕ್ಕೆ ಮೊದಲನೇ ಸ್ಥಾನ

ಶಾಲಾಪೂರ್ವ ವಯಸ್ಸಿನ ಮಕ್ಕಳಿಗೆ ಶಿಕ್ಷಣ, ವೈದ್ಯಕೀಯ ನೆರವು ಮತ್ತು ಪೌಷ್ಟಿಕಾಂಶ ಆಹಾರ ಪೂರೈಕೆ ನೀಡುವ ಯೋಜನೆಗಳನ್ನು ಜಾರಿಗೆ ತಂದಿರುವುದರಲ್ಲಿ ಭಾರತಕ್ಕೆ ಮೊದಲನೇ ಸ್ಥಾನ.

★

ಮದರಾಸು— ಪ್ರತಿಬಂಧಕಾಜ್ಞೆ ಉಲ್ಲಂಘಿಸಿ ವಿಶ್ವವಿದ್ಯಾನಿಲಯ ಭಾಗಕ್ಕೆ ಪ್ರವೇಶಿಸಲು ಯತ್ನಿಸಿದ 450 ಮಂದಿ ಪಶುವೈದ್ಯಾ ಕಾಲೇಜು ವಿದ್ಯಾರ್ಥಿಗಳು ದಸ್ತಗಿರಿ ಮಾಡಲ್ಪಟ್ಟರು.

ಕಾಚಟೀವೊ ದ್ವೀಪ

ಮದರಾಸು— ಕಾಚಟೀವೋ ದ್ವೀಪವು ಬಹು ಕಾಲದಿಂದ ಭಾರತದ ವಶದಲ್ಲಿರುವುದೆಂದು ತೋರಿಸುವ, ತಮಿಳುನಾಡು ವಿನಲ್ಲಿರುವ ಕಾದದಪತ್ರದ ರುಜುವಾತನ್ನು ಪರೀಕ್ಷಿಸಲು ಭಾರತ ಸರಕಾರವು ಒಂದು ಸಮಿತಿ ನೇಮಿಸಲಿದೆ ಎಂದು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿ ಶಾಸನಸಭೆಯಲ್ಲಿ ತಿಳಿಸಿದರು – ಈ ದ್ವೀಪವು ಪಾಕ್ ಜಲಸಂಧಿಯಲ್ಲಿದ್ದು, ಭಾರತ – ಸಿಲೋನ್ ಮಧ್ಯೆ ವ್ಯಾಜ್ಯದ ವಿಷಯವಾಗಿದೆ.

★

ಶಾಸನಸಭೆ

ಬೆಂಗಳೂರು— ಶಾಸನ ಸಭೆಯು, ಪುನಃ ಏಪ್ರಿಲ್ 7 ರಂದು ಸೇರಲು, ನಿನ್ನೆ ಮುಂದುವರಿಸಲಾಯಿತು.

★

ಹೆಸರು ಬದಲಾವಣೆ

ಮದರಾಸು— ಇಂದಿನ ಪರಿಸ್ಥಿತಿಯಲ್ಲಿ ಸ್ವತಂತ್ರ ಪಕ್ಷದ ಹೆಸರು ಬದಲಾವಣೆಯನ್ನು ಆದರ ಸ್ಥಾಪಕ–ನಾಯಕ ಶ್ರೀ ರಾಜಗೋಪಾಲಾಚಾರಿಯವರು ಇಚ್ಛಿಸಿಲ್ಲವೆ.

○

ತಪ್ಪು ಒಪ್ಪಿಗೆ

ವಿಶ್ವಸಂಸ್ಥೆ — ಪಾಕಿಸ್ತಾನದಲ್ಲಿ ಮಾನವೀಯ ಹಕ್ಕು ಮತ್ತು ರಾಷ್ಟ್ರೀಯ ಒಪ್ಪಂದ ಅನುಸರಿಸುವುದರ ಬದಲು ಅದರ ಉಲ್ಲಂಘನೆಯಾಗುತ್ತಿದೆಯೆಂದು ವಿಶ್ವಸಂಸ್ಥೆ ಫೋರಂನಲ್ಲಿ ಪಾಕಿಸ್ತಾನ ಪ್ರತಿನಿಧಿ ಮುನೀರ್ ಅಕ್ರಾಂ ಒಪ್ಪಿಕೊಂಡರು.

★

ವಾರ್ಷಿಕೋತ್ಸವ

ಹೊಂಗನೂರು ಶಾಖಾ ಶಾಸ್ತ್ರಧರ್ಮ ಪ್ರಚಾರ ಸಭೆಯ 13 ನೇ ವಾರ್ಷಿಕೋತ್ಸವವು ತಾ|| 2–4–72 ಭಾನುವಾರ ಸಂಜೆ ಶ್ರೀ ವರದರಾಜಸ್ವಾಮಿ ದೇವಾಲಯದಲ್ಲಿ ನಡೆಯುವುದಾಗಿದೆ

ಹೂ ಗಡಿಯಾರ

ಅಮೇರಿಕಾದಲ್ಲಿ ಕ್ಷಿಪಣಿ ಮತ್ತು ಬಾಂಬುಗಳ ಸದ್ದಿನಿಂದ ನಡೆಯುವ ಗಡಿಯಾರವಿದೆ. ಸ್ಫಟಿಕದ ಹರಳುಗಳ ಗಡಿಯಾರ 1929 ರಲ್ಲಿ ಬಂದಿದ್ದು, ಇದರಲ್ಲಿ 99 ವರ್ಷದಲ್ಲಿ 1 ಸೆಕೆಂಡ್ ವ್ಯತ್ಯಾಸ ಒರುತ್ತದೆ 3 ಸಾವಿರ ವರ್ಷಕ್ಕೊಮ್ಮೆ ವ್ಯತ್ಯಾಸ ಬರುವ-ಪರಮಾಣು ಗಡಿಯಾರ ಬಂದಿದೆ ವಿದ್ಯುತ್‌ಚಾಲಿತ ಗಡಿಯಾರಗಳಿವೆ. ವಿಶ್ವದಲ್ಲೇ ಕಂಪ್ಯೂಟರಾಕಾರ್ಯಗಿನಡೆಯುವ ಗಡಿಯಾರ 1968 ಸ್ವಿಡ್ಜರ್ಲೆಂಡಿನ ಹಾರೋಲಾಜಿಕಲ್ ಏಲೆಕ್ಟ್ರಾನಿಕ್ ಸೆಂಟರಿನಲ್ಲಿ ತಯಾರಾಗಿದೆ. ಇದರ ಒಂದು ಸ್ಫಟಿಕದ ಹರಳು ಸೆಕೆಂಡಗೆ 10 ಸಹಸ್ರ ಸೈಕಲ್ ವೇಗದಲ್ಲಿ ತೂಗಾಡುತ್ತದೆ. ಜಿನೀವಾದ ಉದ್ಯಾನವೊಂದರಲ್ಲಿ ಹೂವುಗಳೇ ಅಂಕಿ, ಮುಳ್ಳುಗಳಾಗಿರುವ ಹೂವಿನ ಗಡಿಯಾರವಿದೆ. ಗೊಂಬೆಗಳು ತಾಸಿಗೊಮ್ಮೆ ಗಂಟೆ ಬಾರಿಸುವ ಗಡಿಯಾರ ಕೆಥಿಡ್ರಲ್ ಗೋಪುರ ವೇಲ್ಸ್‌ನಲ್ಲಿದೆ. ಗಂಟೆ ಬಾರಿಸಿದಾಗ ನಾಲ್ವರು ಸೀವಾಯಿಗಳು ಬ್ಯಾಂಡ್ ಬಾರಿಸುವ ವಿಶೇಷ ಗಡಿಯಾರ ಮೈಸೂರು ಅರಮನೆಯಲ್ಲಿದೆ. [ಕೃ. ಸಂ]

ವುಡ್‌ಲಾಂಡ್ 31-3-72 ರಿಂದ ಅಮೋಘ ಪ್ರಾರಂಭ

ಪ್ರಗತಿ ಚಿತ್ರ ಇಂಟರ್ ನ್ಯಾಷನಲ್‌ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಯೋಗಿತಾ-ಬಾಲಿ, ಶತ್ರುಘ್ನ ಸಿನ್ಹ, ಪ್ರಾಣ್, ರೆಹಮಾನ್, ನಿರೂಪರಾಯ್ ಮುಂತಾದವರು

ಸಂಗೀತ – ರವಿ (ದಿನ 3 ಪ್ರದರ್ಶನಗಳು) ದಿಗ್ದರ್ಶನ – ವೀರೇಂದ್ರ ಸಿನ್ಹ

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕ್ಕೆ ಹಯೇ ಮೇರ ದಿಲ್

ಅಪೆರಾ 24 3 72 ರಿಂದ

ಆಶಾಪರೇಖ್ ಮತ್ತು ನವೀನ ನಿಶ್ಚಲ್ ಪಾತ್ರಪರಿಪೂರ್ಣ ನವರತ್ನರವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ನಾದಾನ್

ಸಂಗೀತ : ಶಂಕರ್ ಜೈಕಿಷನ್ ದಿಗ್ದರ್ಶನ : ಹೇಮನ್ ವರ್ಮ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore 4

ಆಹ್ಲಾದಕರ

ನುವಾಸನೆ

ಮೈಸೂರು ಗಂಧದ ಎಣ್ಣೆಯು

ತನ್ನ ಶ್ರೇಷ್ಠತೆಯಿಂದ

ಜಗದ್ವಿಖ್ಯಾತಿಯನ್ನು ಪಡೆದಿದೆ.

ಪರಿಶುದ್ಧವಾದ ಗಂಧದ

ಎಣ್ಣೆಯು ಮೈಸೂರು ಸರ್ಕಾರದ

ಸೀಲು ಮತ್ತು ಲೇಬಲ್‌ಗಳುಳ್ಳ

ಸೀಸೆಗಳಲ್ಲಿ ಮಾತ್ರ

ದೊರೆಯುತ್ತವೆ.

ಮೈಸೂರು ಸರ್ಕಾರದ ಗಂಧದ ಎಣ್ಣೆ ಕಾರ್ಖಾನೆ.

ಮೈಸೂರು ಮತ್ತು ಶಿವಮೊಗ್ಗ

Protect the Cow

You are safe in your dealings with Bank Road Bahusar, Mysore